



ಪ್ರದೇಶದ ಭತ್ತ, ಕಬ್ಬು ಭರವಸೆಯಾಗಿದ್ದಿದೆ. ಆದರೂ ನಿರಂತರ ಬರಗಾಲದಿಂದ ಬೆಳೆ ನಷ್ಟವಾಗಿ ಕೃಷಿಕರ ಎದೆ ನಡುಗಿಸಿತು, ಅವರನ್ನು ಎಂದಿನಂತೆ ನಗರ ಸಲೀಸಾಗಿ ಸೆಳೆಯಿತು. ಕ್ರಿ.ಶ. 2001ರಿಂದ ನಗರ ಜನಸಂಖ್ಯೆಯ ಏರಿಕೆ ಗಮನಿಸಿದರೆ ಇದು ಮನದಟ್ಟಾಗುತ್ತದೆ.

ಕೃಷಿ ಸಾಧಕರ ಕ್ಷೇತ್ರ ವೀಕ್ಷಣೆಗೆ ರಾಜ್ಯ ಸುತ್ತಾಡುವಾಗ ಮುಂದಿನ 20 ವರ್ಷಗಳ ನಂತರ ಕೃಷಿ ಭವಿಷ್ಯ ಏನಾದೀತು ಎಂದು ಅನೇಕರನ್ನು ಪ್ರಶ್ನಿಸಿದ್ದೆ. ಬೀದರ್, ಬಾಗಲಕೋಟೆ, ವಿಜಯಪುರ, ಬಳ್ಳಾರಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳ ಸುಮಾರು 300ಕ್ಕೂ ಹೆಚ್ಚು ರೈತರು ನೀಡಿದ ಉತ್ತರಗಳು ನನ್ನ ಬಳಿಯಿವೆ. ಕರಾವಳಿ, ಮಲೆನಾಡಿನ ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿದ್ದ ನೋಟಗಳು, ಮಕ್ಕಳಿಲ್ಲದೆ ಹಳ್ಳಿ ಶಾಲೆಗಳು ಮುಚ್ಚಿಹೋಗಿದ್ದು, ಈರುಳ್ಳಿ ಕಳೆ ತೆಗೆಯಲು ಕೊಪ್ಪಳದಲ್ಲಿ ವೃದ್ಧೆಯರೇ ಕುಳಿತ ಸಾಲು ಕಂಡಿರುವೆ. ಊರಿಗೆ ರಸ್ತೆಯಿಲ್ಲ, ಗಂಡಿಗೆ ಹೆಣ್ಣು ಸಿಗುತ್ತಿಲ್ಲ, ಕಾಡು ಪ್ರಾಣಿಗಳ ಹಾವಳಿಯಿಂದ ಕೃಷಿ ಆದಾಯವಿಲ್ಲವೆಂದು 35 ಎಕರೆಯ, ಎತ್ತರದ ಬೆಟ್ಟದ ಅತ್ಯಂತ ಸುಂದರವಾದ ಕೊಲ್ಲೂರಿನ ಮೇಗನಿಯ ಇಡೀ ಹಳ್ಳಿಯೇ ಮಾರಾಟವಾಗಿತ್ತು. ಇಷ್ಟೆಲ್ಲ ಆದರೂ ಗ್ರಾಮ ಪರಿಸ್ಥಿತಿಯ ರೋಗಲಕ್ಷಣ ಯಾರ ಎದೆಗೂ ಅರ್ಥವಾಗಲಿಲ್ಲ. ಹಳ್ಳಿಗೆ ರಸ್ತೆ, ಆಸ್ಪತ್ರೆ, ಶಾಲೆ, ವಿದ್ಯುತ್ ಕೊಡಲು ಹಲವು ಕೋಟಿಗಳು ಬೇಕು. ಕೆಲವೇ ಕೆಲವು ಜನಕ್ಕೆ ಇಷ್ಟೊಂದು ಕೋಟಿ ಖರ್ಚು ಸಾಧ್ಯವಿಲ್ಲವೆಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಮೇಗನಿ ಮಾರಾಟದ ಬಗ್ಗೆ ಚರ್ಚೆಗೆ ಹೋದಾಗ ಹೇಳಿದ್ದರು. 'ಮಾರುವವರು ಮಾರಲಿ, ಕೊಳ್ಳುವವರು ಕೊಳ್ಳಲಿ' ಎಂಬ ಉಡಾಫೆಯಲ್ಲಿ ಸರ್ಕಾರದ ವರ್ತನೆಯಿತ್ತು.

ಅಮೆರಿಕಾದಲ್ಲಿ ಪ್ರತಿಶತ 2.6ರಷ್ಟು ಜನ ಮಾತ್ರ ಕೃಷಿಕರು. ನಮ್ಮಲ್ಲಿ ಶೇಕಡಾ 70 ಜನ ಏಕೆ? ಇವರೆಲ್ಲ ನಗರಕ್ಕೆ ಬಂದರೆ ವ್ಯಾಪಾರ ವಹಿವಾಟು ಹೆಚ್ಚಿ ಕಂಪನಿಗಳಿಗೆ ಲಾಭವಾಗುತ್ತದೆಂಬ ಲೆಕ್ಕವಿತ್ತು. ಕೃಷಿ ನಿರ್ವಹಣೆ ನಿಕ್ಕೀ ನಷ್ಟವೆಂದು ಕೃಷಿಕರೂ ಉತ್ಸಾಹ ಕಳೆದುಕೊಂಡು ಕೈಚೆಲ್ಲಿದರು. ವಯಸ್ಸಾದ ತಂದೆತಾಯಿ, ಹತ್ತಾರು ಎಕರೆ ಭೂಮಿ ಮರೆತು ನಗರ ಸೇರಿದವರಿದ್ದಾರೆ. 'ದುಡಿಯುವವರಿದ್ದರೆ ಅನ್ನ, ಯುವಕರಿದ್ದರೆ ಚೆನ್ನ' ಮಾತು ಕೇಳಿದವರಾರು? ಕೃಷಿಗೆ ಎಷ್ಟೆಲ್ಲ ಯಂತ್ರ ಶೋಧಿಸಿದವರಿಗೆ ಯುವಕರನ್ನು ಹಳ್ಳಿಯಲ್ಲಿ ನಿಲ್ಲಿಸುವ ಒಂದು ಯಂತ್ರ ರೂಪಿಸುವುದು ಸಾಧ್ಯವಾಗಿರಲಿಲ್ಲ. ಹಳ್ಳಿಗರನ್ನು ಹಳ್ಳಿಗೆ ಕಳಿಸುತ್ತ ಕೊರೊನಾ ಈಗ ಅದನ್ನು ಮಾಡುತ್ತಿದೆ. ಹಳ್ಳಿಗಳು ಹೊಸದಾಗಿ ಮುರಿದು ಕಟ್ಟುವಂತೆ ಬಹುದೊಡ್ಡ ಬದಲಾವಣೆಯ ಗಾಳಿ ಬೀಸತೊಡಗಿದೆ.

ಎಂಬತ್ತರ ದಶಕದಲ್ಲಿ ಓದಿದ ಹುಡುಗರಷ್ಟೇ ನಗರಕ್ಕೆ ಹೋಗುತ್ತಿದ್ದ ಕಾಲವಿತ್ತು. ಮನೆ ಮಂದಿಯ ಜೊತೆ ಜಗಳ ಮಾಡಿಕೊಂಡು ನಗರಕ್ಕೆ ಹೋಗಿ ನಾಪತ್ತೆಯಾಗುತ್ತಿದ್ದರು. 'ಕೆಟ್ಟು ಪಟ್ಟಣ ಸೇರು' ಎಂದು ಮಾತಾಡುತ್ತಿದ್ದಲ್ಲಿ 'ನಗರ ಕಟ್ಟುವುದಕ್ಕೆ' ಹಳ್ಳಿ ಖಾಲಿಯಾಯ್ತು. ಕೊಪ್ಪಳದ ಹಿರೇಸಿಂದೋಗಿಯ ಹೊಲದ ಕರಿಜಾಲಿ ಮರದ ನೆರಳಲ್ಲಿ ಕುಳಿತು ಬಸವರಾಜಯ್ಯ ಹೇಳಿದ ಮಾತು ನೆನಪಾಗುತ್ತಿದೆ. 'ಅಣ್ಣಾ ಪೇಟ್ಯಾಗೆ ಕಂಪ್ಯೂಟರ್ ಹಿಡಿದು ಕುಂತ ಮಂದಿಗೆ ಅನ್ನಾ ಬೆಳಿಯಾಕ ಬರ್‍ತಾಂಗಿಲ್ಲ. ಅದ್ಕೆ ಒಂದಲ್ಲ ಒಂದು ದಿನ ಅನ್ನ ಬೆಳೆಯೋದು ಹೇಗೆ ಅಂಥ ಹಳ್ಳಿ ಹುಡುಕ್ಕೊಂಡು ಅವರೆಲ್ಲ ಬರ್‍ತಾರ' ಎಂದಿದ್ದರು. ಕುಡಿಯಲು ನೀರು ಸಿಗುತ್ತಿಲ್ಲ, ದುಬಾರಿ ಜೀವನ ವೆಚ್ಚ ಭರಿಸಲು ಆಗುತ್ತಿಲ್ಲ, ವಿಷ ಆಹಾರ, ಗಾಳಿ ಸೇವನೆಯಿಂದ ಆರೋಗ್ಯ ಹದಗೆಡುತ್ತಿದೆಯೆಂದು ಅಲ್ಲೊಬ್ಬರು ಇಲ್ಲೊಬ್ಬರು ದಶಕಗಳಿಂದ ಬರುತ್ತಿದ್ದರು. ಆದರೆ ಈಗ ಹಾಗಲ್ಲ, ಒಮ್ಮೆಗೆ ರೋಗ ಪ್ರಹಾರಕ್ಕೆ ಹಳ್ಳಿಗಳ ದಾರಿ ಭರ್ತಿಯಾಗುತ್ತಿದೆ. ಇವರಲ್ಲಿ ಹಳ್ಳಿಕಟ್ಟುವ ಕನಸುಳ್ಳವರಿಗಿಂತ ಕಂಗಾಲಾದವರೇ ಜಾಸ್ತಿ. ಕಾಸುಳ್ಳವರು ಕೆಲವರಾದರೆ ಬರಿಗೈಯಲ್ಲಿ ವಾಪಸ್ಸಾಗುತ್ತಿರುವವರೇ ಹೆಚ್ಚು. ಇದು ಭವಿಷ್ಯದ ಆರ್ಥಿಕತೆ ಎಂಥ ಹಂತಕ್ಕೆ ಹೋಗಬಹುದೆಂಬುದರ ದಿಕ್ಸೂಚಿ ಕೂಡ.